ದಿನಾಂಕ 12-02-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲು : ಪ್ರತಿವಾದಿ ಪರ ಶ್ರೀ. ಜಿ.ಎಸ್.ಆರ್.ಕೆ. ವಕೀಲರಿಂದ

ನನ್ನ ತಂದೆಯ ಹೆಸರಿನಲ್ಲಿ ಸರ್ವೆ ನಂ. 90 ನೇದ್ದರಲ್ಲಿ 8 ಎಕರೆ ಇರುತ್ತದೆ. ಸದರಿ ಜಮೀನು ಸಿಂಧನೂರಿನ ಪಿ.ಡಬ್ಲ್ಯೂ.ಡಿ. ಕ್ಯಾಂಪ್‌ನೇದ್ದರಲ್ಲಿರುತ್ತದೆ. ಸರ್ವೆ ನಂ. 103/1 ಕ್ಷೇತ್ರ 2 ಎಕರೆ 10 ಗುಂಟೆ ಮತ್ತು 104/3 ಕ್ಷೇತ್ರ 2 ಎಕರೆ 10 ಗುಂಟೆ ಜಮೀನುಗಲೂ ಇರುತ್ತವೆ. ನನ್ನ ಹೆಸರಿನಲ್ಲಿ ಒಟ್ಟು 6 ಎಕರೆ ಜಮೀನು ಇರುತ್ತದೆ. ನಾನು ಮತ್ತು ನನ್ನ ತಂದೆ ನಮ್ಮ ಆಸ್ತಿಗಳಲ್ಲಿ ಇನ್ನೂ ಯಾವುದೇ ವಿಭಾಗ ಮಾಡಿಕೊಂಡಿರುವುದಿಲ್ಲ. ನಾವು ಇನ್ನೂ ಜಂಟಿಯಾಗಿಯೇ

ಅನುಭವಿಸುತ್ತಿದ್ದೇವೆ. ನಾನು ವ್ಯವಸಾಯವನ್ನು ಮಾಡುತ್ತಿಲ್ಲ, ವ್ಯಾಪಾರವನ್ನು ಮಾಡುತ್ತಿದ್ದೇನೆ. ನಾನು ಪಿ.ಡಬ್ಲ್ಯೂ.ಡಿ. ಕ್ಯಾಂಪ್‌ನಲ್ಲಿ ಅಕ್ಷರ ಶಾಲೆಯನ್ನು ನಡೆಸುತ್ತಿದ್ದೇನೆ. ಸುಮಾರು 5 ವರ್ಷಗಳಿಂದ ಸದರಿ ಶಾಲೆಯನ್ನು ನಾನು ನಡೆಸುತ್ತಿದ್ದೇನೆ. ಸದರಿ ಶಾಲೆಯು ಟ್ರಸ್ಟ್ ಹೆಸರಿನಲ್ಲಿದ್ದ ಅದರಲ್ಲಿ ನಾನು ಮತ್ತು ನನ್ನ ತಂದೆ ಟ್ರಸ್ಟ್‌ನ ಸದಸ್ಯರಿರುತ್ತೇವೆ. ಸರ್ವೆ ನಂ. 90 ಆಸ್ತಿಯನ್ನು ಯಾವ ವರ್ಷದಲ್ಲಿ ಖರೀದಿ ಮಾಡಿರುತ್ತೇವೆಂದು ನನಗೆ ಮಾಹಿತಿ ಇಲ್ಲ. ಸರ್ವೆ ನಂ. 103 ಮತ್ತು 104 ಆಸ್ತಿಗಳನ್ನು ನಾನು 2004 ರಲ್ಲಿ ಖರೀದಿ ಮಾಡಿರುತ್ತೇನೆ. ಸದರಿ ಆಸ್ತಿಗಳು ವೈಯಕ್ತಿಕವಾಗಿ ನನ್ನ ಹೆಸರಿನಲ್ಲಿಯೇ ಇರುತ್ತವೆ. ಈ ದಾವಾ ಹೂಡುವ ಸಂದರ್ಭದಲ್ಲಿ ನಾನು ನನ್ನ ತಂದೆಗೆ ಯಾವುದೇ ಅಧಿಕಾರ ಪತ್ರವನ್ನು ಕೊಟ್ಟಿಲ್ಲ.

ಸರ್ವೆ ನಂ. 104 ಕ್ಷೇತ್ರ 2 ಎಕರೆ 10 ಗುಂಟೆ ಇದರ ಚೆಕ್‌ಬಂದಿ ನನಗೆ ಗೊತ್ತಿಲ್ಲ. ಈದ ದಾವೆಯನ್ನು ರಘು ಮತ್ತು ಬಾಲಾಜಿ ಇವರುಗಳ ವಿರುದ್ಧ ಹೂಡಿರುತ್ತೇವೆ. ಈ ದಾವೆಯನ್ನು ನನ್ನ ತಂದೆ ಮತ್ತು ರಾಜಾಸಾಬ್ ಹೂಡಿರುತ್ತಾರೆ. ರಾಜಾಸಾಬ್ ಈತನ ಹೊಲವನ್ನು ನನ್ನ ತಂದೆ ಖರೀದಿ ಮಾಡಿದ್ದರಿಂದ ರಾಜಾಸಾಬ್ ಈತನನ್ನು ಸೇರಿಸಿರುತ್ತೇವೆ. ಆಲಂಸಾಬ್ ಎನ್ನುವವರ ಬಗ್ಗೆ ನನಗೆ ಮಾಹಿತಿ ಇಲ್ಲ. ವಲೀಸಾಬ್ ರಾಜಾಸಾಬ್ ಈತನ ಮಗನಿರುತ್ತಾನೆ. 2 ನೇ ಮತ್ತು 3 ನೇ ವಾದಿಯರ ಜಮೀನುಗಳು ನಮ್ಮ ಜಮೀನಿನ ಯಾವ ದಿಕ್ಕಿನಲ್ಲಿ ಇರುತ್ತವೆ ಎಂಬುದರ ಬಗ್ಗೆ ನನಗೆ ಮಾಹಿತಿ ಇಲ್ಲ. ಅದೇರೀತಿ ಪ್ರತಿವಾದಿಗಳ ಜಮೀನುಗಳು ಸರ್ವೆ ನಂ. 104 ನೇದ್ದರ ಪೂರ್ವ ದಿಕ್ಕಿನಲ್ಲಿ ಇರುತ್ತವೆ. ಸರರವೆ ನಂ. 104 ನೇದ್ದರ ಕ್ಷೇತ್ರ 2 ಎಕರೆ 10 ಗುಂಟೆ ಮಾತ್ರ ಇರುತ್ತದೆ. ಅದರಲ್ಲಿ ಯಾವುದೇ ಹೆಚ್ಚಿನ ಕ್ಷೇತ್ರ ಮತ್ತು ಕಡಿಮೆ ಕ್ಷೇತ್ರ ಇರುವುದಿಲ್ಲ. ಪ್ರತಿವಾದಿಗಳಿಗೆ ಸೇರಿದ ಆಸ್ತಿಗಳು ಸರ್ವೆ ನಂ. 104 ರಲ್ಲಿ ಇರುತ್ತದೆಯೋ ಅಥವಾ ಇಲ್ಲವೋ ಎಂಬುದರ ಬಗ್ಗೆ ನನಗೆ ಮಾಹಿತಿ ಇಲ್ಲ. ಪ್ರತಿವಾದಿಯರು ಸರ್ವೆ ನಂ. 104 ರಲ್ಲಿ 1 ನೇ ಪ್ರತಿವಾದಿ 2 ಎಕರೆ 3 ಗುಂಟೆ ಮತ್ತು 2 ನೇ ಪ್ರತಿವಾದಿ 1 ಎಕರೆ 25 ಗುಂಟೆ ಜಮೀನನ್ನು ಖರೀದಿ

ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸರ್ವೆ ನಂ. 104 ನ್ನು ಯಾರು ಮುಂಚೆ ಖರೀದಿ ಮಾಡಿರುತ್ತೇವೆಂದು ನನಗೆ ಗೊತ್ತಿಲ್ಲ. ಪ್ರತಿವಾದಿಯರು ತಮ್ಮ ಹೊಲದ ಕ್ಷೇತ್ರ ಕಡಿಮೆ ತೋರಿಸಿದ್ದರಿಂದ ಸರ್ವೆ ಮಾಡಿಸಿರುತ್ತಾರೆ ಎಂದರೆ ಸರಿ. ಸರ್ವೆ ಮಾಡಿಸಿದಾಗ ಪ್ರತಿವಾದಿಯರಿಗೆ ಸೇರಿದ ಸರ್ವೆ ನಂ. 104/4 ಮತ್ತು 5 ಜಮೀನುಗಳಲ್ಲಿ ನಾವು 2 ಎಕರೆ 12 ಗುಂಟೆ ಒತ್ತುವರಿ ಮಾಡಿರುತ್ತೇವೆಂದು ಸರ್ವೆಯರ್‌ರವರು ವರದಿ ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಸರ್ವೆ ವರದಿಯಿಂದ ನಾವು ಖರೀದಿ ಮಾಡಿದಂತಹ ಕ್ಷೇತ್ರಕ್ಕಿಂತ 2 ಎಕರೆ 12 ಗುಂಟೆ ಹೆಚ್ಚುವರಿಯಾಗಿರುವುದು ವರದಿಯಾಗಿರುತ್ತದೆ ಎಂದರೆ ಸರಿಯಲ್ಲ. ನಾವು 2 ಎಕರೆ 12 ಗುಂಟೆ ಜಮೀನನ್ನು ಒತ್ತುವರಿ ಮಾಡಿರುತ್ತೇವೆಂದು ಸರ್ವೆಯರ್ ನಮ್ಮ ಸಮಕ್ಷಮ ಸರ್ವೆ ಮಾಡಿ ವರದಿ ನೀಡಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಸದರಿ ವಿಷಯ ನನ್ನ ತಂದೆಗೆ ಗೊತ್ತಿರುತ್ತದೆ ಎಂದು ನುಡಿಯುತ್ತಾರೆ. ಪ್ರತಿವಾದಿಯರು ನಮ್ಮನ್ನು ನಾವು ಅವರಿಗೆ ಸೇರಿದ ಜಮೀನನ್ನು ಅತಿಕ್ರಮಣ ಮಾಡಿದ್ದೇವೆಂದು ಹೇಳಲಾದ ಜಮೀನನ್ನು ಬಿಡುವಂತೆ ಕೇಳಿದ್ದರಿಂದ ಅವರ ವಿರುದ್ಧ ನಾವು ಈ ಸುಳ್ಳು ಪ್ರಕರಣ ದಾಖಲು ಮಾಡಿರುತ್ತೇವೆ ಎಂದರೆ ಸರಿಯಲ್ಲ. ಸದರಿ ಒತ್ತುವರಿ ಮಾಡಿದ್ದೇವೆ ಎಂದು ಹೇಳಲಾದ ಜಮೀನಿಂದ ಬಂದಂತಹ ಫಲವನ್ನು ಅನುಭವಿಸಿದ್ದರಿಂದ ಅದನ್ನು ಪ್ರತಿವಾದಿಗಳಿಗೆ ವಾಪಾಸ್ ನೀಡುವ ಬಾಧ್ಯಸ್ಥನಿರುತ್ತೇವೆ ಎಂದರೆ ಸರಿಯಲ್ಲ. ನಾವು ನೊಂದ್ ಪತ್ರದ ಮೂಲಕ ಖರೀದಿ ಮಾಡಿದಂತಹ ಜಮೀನಿನ ಕ್ಷೇತ್ರಕ್ಕೆ ಮಾತ್ರ ನಮಗೆ ಹಕ್ಕು ಅಧಿಕಾರ ಇರುತ್ತದೆ ಎಂದರೆ ಸರಿ. ಅದನ್ನು ಹೊರತುಪಡಿಸಿ ಹೆಚ್ಚಿನ ಕ್ಷೇತ್ರದ ಜಮೀನಿಗೆ ನಮಗೆ ಯಾವುದೇ ಹಕ್ಕು ಮತ್ತು ಅಧಿಕಾರ ಇರುವುದಿಲ್ಲ ಎಂದರೆ ಸರಿ. ನ್ಯಾಯಾಲಯದಿಂದ ಆಯುಕ್ತಕರನ್ನು ನೇಮಕ ಮಾಡಿ ದಾವಾ ಆಸ್ತಿಯನ್ನು ಪರಿಶೀಲನೆ ಮಾಡಲು ನಿಮಗೇನಾದರೂ ತಕರಾರು ಇದೆಯಾ ಎಂದರೆ ಸಾಕ್ಷಿಯು ಅದು ನಮ್ಮ ತಂದೆಗೆ ಗೊತ್ತಿರುತ್ತದೆ ಎಂದು ನುಡಿಯುತ್ತಾರೆ. ಸರ್ವೆ ವರದಿಯ ವಿರುದ್ಧ ನನ್ನ ತಂದೆ ಮೇಲ್ಮನವಿ ಸಲ್ಲಿಸಿರುತ್ತಾರೆ. ಸದರಿ ವಿಷಯದ ಬಗ್ಗೆ ನನ್ನ ತಂದೆ ನನಗೆ ತಿಳಿಸಿರುತ್ತಾರೋ ಅಥವಾ ಇಲ್ಲವೋ ಎಂಬುದರ ಬಗ್ಗೆ

ನನಗೆ ಮಾಹಿತಿ ಇಲ್ಲ. ಪ್ರತಿವಾದಿಯರಿಗೆ ಸೇರಿದ ಜಮೀನನ್ನು ನಾವು ಕಾನೂನುಬಾಹಿರವಾಗಿ ಅತೀಕ್ರಮಿಸಿರುತ್ತೇವೆ& ಮತ್ತು ಅದನ್ನು ಬಿಡುವ ಬಾಧ್ಯಸ್ಥರಾಗಿರುತ್ತೇವೆ ಎಂದರೆ ಸರಿಯಲ್ಲ. ಸರ್ವೆ ನಂ. 104 ಜಮೀನಿನ ಯಾವ ದಿಕ್ಕಿನಲ್ಲಿ ಸರ್ವೆ ನಂ. 103 ಇರುತ್ತದೆ ಎಂದು ನನಗೆ ಗೊತ್ತಿಲ್ಲ, ನನ್ನ ತಂದೆಗೆ ಗೊತ್ತು. ನಾವು ಖರೀದಿ ಮಾಡಿದ ಹೊಲಕ್ಕೆ 4 ರಿಂದ 5 ಬಾರಿ ಹೋಗಿರುತ್ತೇನೆ. 2 ನೇ ಮತ್ತು 3 ನೇ ವಾದಿಯರು ಈ ದಾವೆಯಲ್ಲಿ ಏನಾದರೂ ಪರಿಹಾರವನ್ನು ಕೇಳಿರುತ್ತಾರೋ ಅಥವಾ ಇಲ್ಲವೋ ಎಂಬುದರ ಬಗ್ಗೆ ಮಾಹಿತಿ ಇಲ್ಲ. ಸದರಿಯವರು ಈ ದಾವೆಯಲ್ಲಿ ಯಾವುದೇ ಪರಿಹಾರವನ್ನು ಕೇಳಿಲ್ಲ ಎಂದರೆ ನನಗೆ ಮಾಹಿತಿ ಇಲ್ಲ. ಪ್ರತಿವಾದಿಯರ ಜಮೀನಿನ ವಿಸ್ತೀರ್ಣಕ್ಕೆ ನಮ್ಮ ಜಮೀನಿನ ವಿಸ್ತೀರ್ಣ ಹೊಂದಿಕೊಂಡಿರುತ್ತದೆ ಎಂದರೆ ಸರಿ. ಪ್ರತಿವಾದಿಗಳ ಜಮೀನುಗಳು ನಮ್ಮ ಜಮೀನಿನ ಪಶ್ಚಿಮ ಭಾಗಕ್ಕೆ ಇರುತ್ತವೆ ಎಂದರೆ ಸರಿ. ಪ್ರತಿವಾದಿಯರಿಗೆ ಸೇರಿದ ಜಮೀನನ್ನು ನಾವು ಒತ್ತುವರಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ಸದರಿ ವಿಷಯವನ್ನು ನನಗೆ ಗೊತ್ತಿದ್ದರೂ ಸಹ ಅವರಿಗೆ ಅದನ್ನು ಬಿಟ್ಟುಕೊಡದೇ ಕಾನೂನು ಬಾಹಿರವಾಗಿ ಅಲ್ಲಿ ಸ್ವಾಧೀನದಲ್ಲಿರುತ್ತೇವೆ ಎಂದರೆ ಸರಿಯಲ್ಲ. 2 ನೇ ಮತ್ತು 3 ನೇ ಪ್ರತಿವಾದಿಯರು ನಮ್ಮ ಪ್ರಕರಣಕ್ಕೆ ಬಲತೋರಿಸುವ ಉದ್ದೇಶದಿಂದ ಈ ದಾವೆಯಲ್ಲಿ ಅವರನ್ನು ಸೇರಿಸಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ನಾವು ಪ್ರತಿವಾದಿಯರಿಗೆ ಸೇರಿದ 2 ಎಕರೆ 12 ಗುಂಟೆ ಜಮೀನನ್ನು ಕಾನೂನುಬಾಹಿರವಾಗಿ ಅತೀಕ್ರಮಿಸಿರುತ್ತೇವೆ ಎಂದರೆ ಸರಿಯಲ್ಲ. ಸರ್ವೆ ವರದಿ ಆಧಾರದಡಿಯಲ್ಲಿ ಸರ್ವೆ ನಂ. 104/4 ಕ್ಷೇತ್ರ 1 ಎಕರೆ 16 ಗುಂಟೆ ಮತ್ತು 104/5 ನೇದ್ದರಲ್ಲಿ 36 ಗುಂಟೆ ಜಮೀನನ್ನು ಒತ್ತುವರಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ಆದ್ದರಿಂದ ಒಟ್ಟು 2 ಎಕರೆ 12 ಗುಂಟೆ ಜಮೀನನ್ನು ಪ್ರತಿವಾದಿಯರಿಗೆ ನಾವು ಬಿಡಬೇಕಾಗುತ್ತದೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ನನ್ನ ಉಕ್ತದ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿರುತ್ತಾರೆ)

ಓ. ಹೇ. ಕೇ. ಸರಿ ಇದೆ,

2 ನೇ ಅಪರ ಸಿಜೆ & ಜೆಎಂಎಫ್‌ಸಿ, ನ್ಯಾಯಾಲಯ, ಸಿಂಧನೂರು.